**ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 15-11-2023.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಆರ ಆರ ಕೆ ವಕೀಲರಿಂದಃ**

5. ನಾನು tax consultant ಆಗಿ ಕೆಲಸ ಮಾಡಲು ಪರವಾನಿಗೆ ಪಡೆಯ ಬೇಕಾದರು ಸಹ ಪರಿವಾನಿಗೆ ಬೇಕಾಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. 1988 ರಲ್ಲಿ ಪ್ರತಿವಾದಿ ನಂ.3 ರವರು ಹುಬ್ಬಳ್ಳಿಗೆ ಕಾಲೇಜು ಕಲಿಯಲು ಬಂದಿದ್ದರು ಎಂದರೆ ನಿಜ. ಅವರು 1997 ರಲ್ಲಿ ಪದವಿ ಪಡೆದು ತಮ್ಮ ವಕೀಲ ವೃತ್ತಿ ಆರಂಭ ಮಾಡಿದ್ದರು ಎಂದರೆ ನಿಜ. ವಾದಿ ನಂ.1 ಮತ್ತು ಪ್ರತಿವಾದಿ ನಂ.5 ರವರು ಕೇವಲ ಒಕ್ಕಲುತನ ಮಾಡುತ್ತಾರೆ ಎಂದರೆ ನಿಜ. 1997 ರಲ್ಲಿ ನನ್ನ ಮದುವೆ ಆಯಿತು. ನಿಮ್ಮ ತಂದೆ ತಾಯಿಗೆ ಆರೋಗ್ಯ ಸರಿ ಇರಲಿಲ್ಲ ಆದ್ದರಿಂದ ಆರೋಗ್ಯದ ಖರ್ಚು ಹಾಗೂ ನಿಮ್ಮ ಕುಟುಂಬದ ಖರ್ಚನ್ನು ನೀವು ಭರಿಸುತ್ತಿದ್ದಿರಿ ಎಂದರೆ ಸಾಕ್ಷಿಯು ಹಣದ ಅವಶ್ಯಕತೆ ಇದೆ ಎಂದು ನನ್ನ ಪಾಲಕರು ಕೇಳಿದಾಗ ಕೊಡುತ್ತಿದ್ದೆ ಎಂದು ಹೇಳುತ್ತಾರೆ. ಎಷ್ಟು ಹಣ ಕೊಡುತ್ತಿದ್ದೆ ಎಂದು ಹೇಳಲು ನೆನಪಿಲ್ಲ. ನಾನು ವಾರಕ್ಕೊಮ್ಮೆ ಬಂದು ಹಣ ಕೊಟ್ಟರೆ ನನ್ನ ಪಾಲಕರು ಮಾರುಕಟ್ಟೆಯಲ್ಲಿ ದಿನಸಿಗಳನ್ನು ಖರೀದಿಸಿ ಮನೆಗೆ ಪೂರೈಕೆ ಮಾಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಾನು ವಾರಕ್ಕೊಮ್ಮೆ ಬರುತ್ತಿರಲಿಲ್ಲ ನನ್ನ ತಂದೆ ತಾಯಿ ನನ್ನ ಬಳಿ ಯಾವಾಗಾದರು ಬಂದರೆ ಹಣದ ಅವಶ್ಯಕತೆ ಇದ್ದರೆ ಕೇಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ವಾದಿ ನಂ.1 ಮತ್ತು ಪ್ರತಿವಾದಿ ನಂ.5 ರವರಿಗೆ ಒಕ್ಕಲುತನಕ್ಕೆ ಹಣದ ಅವಶ್ಯಕತೆ ಇದ್ದಾಗ ಸಹ

ಅವರಿಗೆ ಹಣವನ್ನು ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಊರಿನ ಜನರು ಬಹಳ ಮರ್ಯಾದೆ ಕೊಡುತ್ತಿದ್ದರು ಹಾಗೂ ನಮ್ಮ ತಂದೆ ಸಹ ಊರಿನ ಜನರಿಗೆ ಮರ್ಯಾದೆ ಕೊಡುತ್ತಿದ್ದರು. ನಮ್ಮ ತಂದಗೆ ಊರಿನಲ್ಲಿ ಯಾರಾದರು ಹಿರಿಯತನ ಮಾಡುತ್ತಿದ್ದರೆ ಅವರ ಮೇಲೆ ವಿಶ್ವಾಸ ಹೊಂದಿದ್ದರು ಎಂದರೆ ಇರಬಹುದು.

6. ದಿಃ 09-05-1972 ರಲ್ಲಿ ನಮ್ಮ ತಂದೆ ಕಸಮಾಳಗಿ ಗ್ರಾಮದ ಕುಲಕರ್ಣಿ ರವರಿಂದ 1 ಎಕರೆ ಜಮೀನನ್ನು ಖರೀದಿಸಿದ್ದರುಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಚಿಕ್ಕಬಾಲಕನಾಗಿದ್ದೆ ಸದರಿ ವಿಷಯ ನೆನಪಿಲ್ಲ ಎಂದು ಹೇಳುತ್ತಾರೆ. ನೀವು ನಿಮ್ಮ ತಂದೆ ಸರ್ವೆ ನಂ.55/1 ಕಸಮಾಳಗಿ ಗ್ರಾಮದ ಜಮೀನು ಖರೀದಿಸಿದ ಜಮೀನು ಹಾಗೂ ಅದರ ಖರೀದಿ ಪತ್ರ ಅವರ ಹೆಸರಿನಲ್ಲಿ ಇದೆ ಅದನ್ನು ಇವತ್ತಿನವರೆಗೆ ನೋಡಿದ್ದಿರಾ ಎಂದರೆ ಸಾಕ್ಷಿಯು ನೋಡಿಲ್ಲ ಎಂದು ಹೇಳುತ್ತಾರೆ. ವಾದಿ ಹಾಜರು ಮಾಡಿರುವ ನಿಪಿ.15 ಖರೀದಿ ಪತ್ರ ಕುಲಕರ್ಣಿ ರವರಿಂದ ನಮ್ಮ ತಂದೆ ಖರೀದಿಸಿದ ಆಸ್ತಿಯ ಖರೀದಿ ಪತ್ರ ಎಂದರೆ ನಿಜ. ಉತಾರ ನಿಮ್ಮ ತಂದೆ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ನನ್ನ ಕಾಕಾನ ಹೆಸರು ಮತ್ತು ನಮ್ಮ ತಂದೆ ಯ ಹೆಸರು ಜಂಟಿಯಾಗಿ ಇದೆ ಎಂದು ಹೇಳುತ್ತಾರೆ. ನಮ್ಮ ತಂದೆ ತನ್ನ ಸಹೋದರರ ಹೆಸರು ಸಹ ಸದರಿ ಆಸ್ತಿಗೆ ಇರಲಿ ಎಂದು ಅವರ ಹೆಸರಿನಲ್ಲೂ ಜಂಟಿಯಾಗಿ ತನ್ನ ಹೆಸರು ದಾಖಲಿಸಿಕೊಂಡಿದ್ದರು ಎಂದರೆ ಸಾಕ್ಷಿಯು

ಇರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ಕುಟುಂಬಕ್ಕೆ ಇರುವ ಜಮೀನುಗಳ ಮಾಹಿತಿ ನನಗೆ ಇದೆ.

7. ಸರ್ವೆ ನಂ. 50/1 ಕಸಮಾಳಗಿ ಗ್ರಾಮದ ಜಮೀನು ವಿಸ್ತೀರ್ಣ 3 ಎಕರೆ 12 ಗುಂಟೆ ನಿಮ್ಮ ಕುಟುಂಬದ ಜಮೀನು ಎಂದರೆ ಸಾಕ್ಷಿಯು ನಮ್ಮ ತಂದೆ ಹಾಗೂ ಅವರ ಸಹೋದರರ ಜಮೀನು ಎಂದು ಹೇಳುತ್ತಾರೆ. ನನ್ನ ತಂದೆ ಹಾಗೂ ಅವರ ಸಹೋದರರು ಬಾಯಿಮಾತಿನ ಪಾಲುವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಾಯಿಮಾತಿನ ಪಾಲುವಾಟ್ನಿಯಲ್ಲಿ ಸರ್ವೆ ನಂ.55/1 ವಿಸ್ತೀರ್ಣ 1 ಎಕರೆ 18 ಗುಂಟೆ ಜಮೀನು ನಮ್ಮ ತಂದೆಯ ಹಿಸ್ಸೆಗೆ ಹಾಗೂ ಸರ್ವೆ ನಂ.50/1 ವಿಸ್ತೀರ್ಣ 3 ಎಕರೆ 12 ಗುಂಟೆ ನಮ್ಮ ತಂದೆಯ ಮೂರು ಜನ ಸಹೋದರರ ಪಾಲಿಗೆ ಎಂದು ಬಾಯಿಮಾತಿನ ಪಾಲುವಾಟ್ನಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನಗೆ ನಮ್ಮ ತಂದೆ ಹಾಗೂ ಅವರ ಸಹೋದರರ ನಡುವೆ ಬಾಯಿಮಾತಿನ ಪಾಲುವಾಟ್ನಿ ಆಗಿದೆ ಎನ್ನಲಾದ ಕುರಿತು ವಿಷಯಗೊತ್ತಿರಲಿಲ್ಲ ಆದ್ದರಿಂದ ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ. ನಾನು ಸದರಿ ವಿಚಾರ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿದ್ದೇನೆ ಬರೆಸಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಹಿಸ್ಸೆಗೆ ಬಂದಿರುವ ಜಮೀನಿನಲ್ಲಿ ನಾವು ಸ್ವಾ ಧೀನದಲ್ಲಿ ಇದ್ದೇವೆ ಹಾಗೂ ನಮ್ಮ ತಂದೆಯ ಸಹೋದರರಿಗೆ ಬಂದಿರುವ ಆಸ್ತಿಯ ಸ್ವಾಧೀನದಲ್ಲಿ ಅವರು ಇದ್ದಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಂಗನಕೊಪ್ಪ ಗ್ರಾಮದ ಜಮೀನು ಸರ್ವೆ

ನಂ.210 ನಮ್ಮ ತಂದೆ ಹಾಗೂ ಅವರ ಸಹೋದರರಿಗೆ ಸಂಬಂಧಪಟ್ಟಿದೆ ಎಂದರೆ ಇರಬಹುದು. ಸದರಿ ಜಮೀನಿನಲ್ಲಿ 21 ಗುಂಟೆ ಜಮೀನು ನಮ್ಮ ತಂದೆಯ ಹಿಸ್ಸೆಗೆ ಹಾಗೂ ಉಳಿಕೆ 21 ಗುಂಟೆ ಬಾಬು ಮತ್ತು ವಿಠ್ಠಲ ರವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಿಠ್ಠಲ ರವರಿಗೆ ಹಣದ ಅವಶ್ಯಕತೆ ಇದ್ದುದ್ದರಿಂದ ಅದನ್ನು ಬಾಬುರವರಿಗೆ ಮಾರಾಟ ಮಾಡಿದ್ದು, ಬಾಬುರವರು ಈಗ 21 ಗುಂಟೆ ಜಮೀನಿನ ಮಾಲೀಕರು ಹಾಗೂ ಅವರ ಹೆಸರಿನಲ್ಲಿ ಸದರಿ 21 ಗುಂಟೆ ಜಮೀನು ಇದೆ ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ಹಾಗೂ ಅವರ ಸಹೋದರರ ನಡುವೆ ಆದ ಪಾಲುವಾಟ್ನಿಗೆ ನನಗೆ ಯಾವುದೇ ತಕರಾರು ಇಲ್ಲ. ಸದರಿ ಬಾಯಿಮಾತಿನ ಪಾಲುವಾಟ್ನಿಗೆ ವಿಠ್ಠಲ ಹಾಗೂ ಬಾಬುರವರ ತಕರಾರು ಸಹ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಹಾಗೂ ಅವರ ಸಹೋದರರ ನಡುವೆ ಆದ ಪಾಲುವಾಟ್ನಿಯಂತೆ ಯಾವ ಜಮೀನು ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ.

8. ಕಬ್ಬು ಬೆಳೆಯನ್ನು ಕಾರ್ಖಾನೆಗೆ ಕಳುಹಿಸಿದಾಗ ಅವರು ಕಬ್ಬಿನ ಬೆಳೆ ಯಾವ ಊರಿನಿಂದ ಬಂದಿದೆ ಎಂದು ರಶೀದಿಯಲ್ಲಿ ಊರಿನ ಹೆಸರು ಬರೆಯುತ್ತಾರೆ ಎಂದರೆ ನಿಜ. ಕೇರವಾಡ ಗ್ರಾಮದ ಸರ್ವೆ ನಂ. 180/ಬಿ ವಿಸ್ತೀರ್ಣ 2 ಎಕರೆ 1 ಗುಂಟೆ ಜಮೀನು 1999 ರಲ್ಲಿ ನನಗೆ, ವಾದಿ ನಂ.1 ಮತ್ತು ಪ್ರತಿವಾದಿ ನಂ.5 ರವರಿಗೆ ಸರ್ಕಾರದಿಂದ ಮಂಜೂರು ಜಮೀನು ಎಂದರೆ ನಿಜ. ಕೇರವಾಡ ಗ್ರಾಮದಲ್ಲಿ ಮೇಲೆ ಹೇಳಿದ ಜಮೀನು ಬಿಟ್ಟು ನಮ್ಮ ಮನೆತನಕ್ಕೆ ಸಂಬಂಧಿಸಿದ

ಹಾಗೂ ಖರೀದಿಸಿದ ಬೇರೆ ಯಾವ ಜಮೀನು ಇರುವುದಿಲ್ಲ. ಬಾಳಪ್ಪಾ ಕಮ್ಮಾರ ರವರ ಜಮೀನನ್ನು ವಾದಿ ನಂ.1 ಹಾಗೂ ಪ್ರತಿವಾದಿ ನಂ.5 ರವರು ಸುಮಾರು 30 ವರ್ಷ ಸಾಗುವಳಿ ಮಾಡುತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ನಂ.1 ಹಾಗೂ ಪ್ರತಿವಾದಿ ನಂ.5 ರವರು ಈರಪ್ಪ ಬಡಸ್ಕರ ರವರ 1 ಎಕರೆ 19 ಗುಂಟೆ ಜಮೀನನ್ನು ಸಹ ಸುಮಾರು 10 ವರ್ಷ ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ನಂ.1 ಹಾಗೂ ಪ್ರತಿವಾದಿ ನಂ.5 ರವರು ಪರಶುರಾಮ ಬಡಸ್ಕರ ರವರ 1 ಎಕರೆ 15 ಗುಂಟೆ ಜಮೀನನ್ನು ಸಹ ಸುಮಾರು 6-7 ವರ್ಷ ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ನಂ.1 ಹಾಗೂ ಪ್ರತಿವಾದಿ ನಂ.5 ರವರು ದೇವಲ್ಕರ ರವರ ಜಮೀನನ್ನು ಸಹ 2004-05 ರಿಂದ 2012 ರ ವರೆಗೆ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ನಂ.1 ಹಾಗೂ ಪ್ರತಿವಾದಿ ನಂ.5 ರವರು ಪುಲಾದ ಬಡಸ್ಕರ ರವರ 2 ಎಕರೆ 20 ಗುಂಟೆ ಜಮೀನನ್ನು ಸಹ ಸನ್ನ 2000 ದಿಂದ ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲೆ ಹೇಳಿದ ಎಲ್ಲಾ ಜಮೀನುಗಳು ಕಸಮಾಳಗಿ ಹಾಗೂ ಕೇರವಾಡ ಗ್ರಾಮದ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ವಾದಿ ನಂ.1 ಹಾಗೂ ಪ್ರತಿವಾದಿ ನಂ.5 ರವರು ಬೆಳಿಗ್ಗೆ ಯಿಂದ ಸಾಯಂಕಾಲದವರೆಗೆ ಟ್ರಾಕ್ಟರ ದಿಂದ ಒಕ್ಕಲುತನ ಕೆಲಸ ಮಾಡುವುದು ಬಿಟ್ಟು ಬೇರೆ ಏನು ಮಾಡುತ್ತಿರಲಿಲ್ಲ ಎಂದರೆ ಇರಬಹುದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. 1 ಎಕರೆಗೆ ಸುಮಾರು 30-40 ಟನ್ ಕಬ್ಬು ಬೆಳೆ ಬರುತ್ತದೆ ಎಂದರೆ ನಿಜ. ವಾದಿ ನಂ.1 ಹಾಗೂ ಪ್ರತಿವಾದಿ ನಂ.5 ರವರು ಸ್ವಂತ ಜಮೀನುಗಳಲ್ಲಿ

ಕೆಲಸ ಮಾಡುತ್ತಿದ್ದರಿಂದ ಒಕ್ಕಲುತನದ ಖರ್ಚು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಪ್ರತಿವಾದಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುಡಲಾಯಿತು.

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**